# ಸ್ಟಾರ್ಟ್‌ಅಪ್ ಉಪನ್ಯಾಸ

ಮಂಗಳೂರು: ಎಸ್‌ಟಿಇಪಿ, ಸುರತ್ಕಲ್ ಎನ್‌ಐಟಿಕೆ ಶೈಕ್ಷಣಿಕ ಪ್ರಪಂಚದಲ್ಲಿ ಸ್ಟಾರ್ಟ್‌ಅಪ್‌ಗಳ ಪಾತ್ರದ ಕುರಿತು ಉಪನ್ಯಾಸ ಕಾರ್ಯಕ್ರಮ ಎನ್‌ಐಟಿಕೆ ಡಿಜಿಟಲ್ ಗ್ರಂಥಾಲಯದಲ್ಲಿ ಇಂದು ನಡೆಯಿತು.

ವಿಎನ್‌ಪಿ2ಎಸ್ ಸಂಸ್ಥಾಪಕ ಮತ್ತು ವ್ಯವಸ್ಥಾಪಕ ನಿರ್ದೇಶಕರಾದ ಡಾ.ಸಿ.ವಿ.ಕಾಮತ್ ಉಪನ್ಯಾಸ ನೀಡಿದರು. ಭಾರತದಲ್ಲಿ ಸ್ಟಾರ್ಟ್‌ಅಪ್ ಅನ್ನು ಹೇಗೆ ಪ್ರಾರಂಭಿಸಬೇಕು-ವೈವಿಧ್ಯಮಯ ವ್ಯಾಪಾರ ಮಾರ್ಗಗಳನ್ನು ಕಾರ್ಯಗತಗೊಳಿಸುವ ವಿಧಾನಗಳು, ಸ್ಟಾರ್ಟ್‌ಅಪ್‌ಗಳ ವೈಫಲ್ಯಕ್ಕೆ ಕಾರಣವಾಗುವ ಅಂಶಗಳು, ವಿಜ್ಞಾನ ಮತ್ತು ತಂತ್ರಜ್ಞಾನವನ್ನು ಒಳಗೊಳ್ಳುವ ವಿಧಾನಗಳು. ಮುಂಬರುವ ದಿನಗಳಲ್ಲಿ ಎಐ, ಎಂಎಲ್, ಐಒಟಿಯ ಪರಿಣಾಮಕಾರಿ ಬಳಕೆ ಕುರಿತು ಚರ್ಚಿಸಿದರು.

ಸ್ಟಾರ್ಟ್‌ಅಪ್‌ಗಳ ಟಾಪ್ 11 ಟ್ರೆಂಡ್‌ಗಳು, ಜಾಗತಿಕ ವೇದಿಕೆಯಲ್ಲಿ ಸ್ಟಾರ್ಟ್‌ಅಪ್‌ಗಳಲ್ಲಿ ಭಾರತದ ಪಾತ್ರ, 2022 ರಲ್ಲಿ ಜನಪ್ರಿಯ ಸ್ಟಾರ್ಟ್‌ಅಪ್‌ಗಳ ಉದ್ಯಮಗಳು, ಸ್ಟಾರ್ಟ್‌ಅಪ್‌ಗಳ ಪ್ರಮುಖ ಯಶಸ್ಸಿನ ಅಂಶಗಳು, ಎಸ್‌ಡಿಜಿಗಳಿಗೆ ಕೊಡುಗೆ ನೀಡುವ ಸ್ಟಾರ್ಟ್‌ಅಪ್‌ಗಳು ಇತ್ಯಾದಿಗಳು ಸಂವಾದದ ಅವಧಿಯ ಪ್ರಮುಖಾಂಶಗಳು. ಡಾ.ಅರುಣ್ ಇಸ್ಲೂರ್, ಪ್ರೊಫೆಸರ್, ಪ್ರಭಾರಿ, ಎಸ್‌ಟಿಇಪಿ ಮತ್ತು ತಂಡ ಖಿಇ ಸಂವಾದ ಅಧಿವೇಶನವನ್ನು ಆಯೋಜಿಸಿದರು.



Samuytha karnataka, Date: 23_10_22. p, 02